# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್ ಇವರು ನಿಯಮ 72 ರಡಿ ಗಮನಸೆಳೆದಿರುವ ಸೂಚನೆಗೆ ಉತ್ತರ

**ವಿಷಯ:** ವಿಜಯಪುರ-ಬಾಗಲಕೋಟೆ ಜಿಲ್ಲೆಗಳಲ್ಲಿ 2019ರ ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ವಿವಿಧ ನದಿಗಳ ಪ್ರವಾಹ ಹಾಗೂ ಮಳೆಯಿಂದಾಗಿ ಅಪಾರ ಪ್ರಮಾಣದಲ್ಲಿ ಹಾನಿ ಸಂಭವಿಸಿ, ಜನ-ಜಾನುವಾರುಗಳು ಪ್ರಾಣ ಕಳೆದುಕೊಂಡಿರುತ್ತಾರೆ. ಮನೆಗಳು, ಶಾಲಾ ಕಟ್ಟಡಗಳು ಹಾಗೂ ಅಂಗನವಾಡಿ ಕಟ್ಟಡಗಳು ಕುಸಿದು ಬಿದ್ದಿರುವುದರಿಂದ ಜನರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಅಲ್ಲದೆ ರೈತರ ಅಪಾರ ಪ್ರಮಾಣದ ಬೆಳೆ ನಾಶವಾಗಿ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಕುರಿತು ಸರ್ಕಾರ ಸಮರ್ಪಕ ಪರಿಹಾರ ಕಾರ್ಯಗಳನ್ನು ಕೈಗೊಳ್ಳದೆ ಉಂಟಾದ ಗಂಭೀರ ಸಮಸ್ಯೆಗಳ ಬಗ್ಗೆ.

* * * * *

**ಉತ್ತರ:** ವಿಜಯಪುರ ಜಿಲ್ಲೆಯಲ್ಲಿ ಆಗಸ್ಟ್-2019 ರಲ್ಲಿ ಸಂಭವಿಸಿದ ಪ್ರವಾಹದಿಂದಾಗಿ ಆಲಮಟ್ಟಿ ಜಲಾಶಯ ಮತ್ತು ನಾರಾಯಣ ಜಲಾಶಯದ ಹಿನ್ನೀರಿನಿಂದ ಜಿಲ್ಲೆಯ ಒಟ್ಟು 21 ಗ್ರಾಮಗಳು ಜಲಾವೃತವಾಗಿದ್ದು, 54 ಗ್ರಾಮಗಳು ಪ್ರವಾಹದ ಬಾಧೆಗೆ ಒಳಗಾಗಿರುತ್ತವೆ. ಪ್ರವಾಹ ಪೀಡಿತ ಗ್ರಾಮಗಳ ಹಾನಿ ಮತ್ತು ಕೈಗೊಂಡ ದುರಸ್ಥಿ ವಿವರ ಕೆಳಕಂಡಂತಿದೆ.

1) ಜಿಲ್ಲೆಯ 12 ಕಾಳಜಿ ಕೇಂದ್ರಗಳಲ್ಲಿ 3001 ಜನ ಪ್ರವಾಹ ಸಂತ್ರಸ್ಥರಿಗೆ ಆಶ್ರಯ ಕಲ್ಪಿಸಲಾಗಿರುತ್ತದೆ. ಬಟ್ಟೆ ಮತ್ತು ದಿನಬಳಕೆ ವಸ್ತುಗಳನ್ನು ಕಳೆದುಕೊಂಡ 480 ಕುಟುಂಬಗಳಿಗೆ ತಲಾ ರೂ.10,000/- ಸಹಾಯಧನ ನೀಡಲಾಗಿದೆ.

2) ಪ್ರವಾಹದಿಂದ ಹಾನಿಗೀಡಾದ ಜಿಲ್ಲೆಯ ಮುದ್ದೆಬಿಹಾಳ ಮತ್ತು ನಿಡಗುಂದಿ ತಾಲ್ಲೂಕಿನ ಒಟ್ಟು 162 ಮನೆಗಳ ಪೈಕಿ ಶೇ.15 ರಿಂದ ಶೇ.25 ರಷ್ಟು ಹಾನಿಯಾಗಿರುವ 'ಸಿ' ವರ್ಗದ 144 ಮನೆಗಳಿಗೆ ತಲಾ ರೂ.50,000/- ಮತ್ತು ಶೇ.25 ರಿಂದ ಶೇ.75 ರಷ್ಟು ಹಾನಿಯಾಗಿರುವ 'ಬಿ' ವರ್ಗದ 18 ಮನೆಗಳಿಗೆ ತಲಾ ರೂ.1.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3) ಸಂತ್ರಸ್ಥರು ನಿರ್ಮಿಸಿಕೊಳ್ಳುತ್ತಿರುವ ಮನೆ ನಿರ್ಮಾಣದ ಹಂತವನ್ನಾಧರಿಸಿ, ಬಾಕಿ ಉಳಿದ ಅನುದಾನವನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಬಿಡುಗಡೆಗೊಳಿಸಲಾಗುತ್ತಿದೆ.

4) ಪ್ರವಾಹದಿಂದ ಹಾನಿಗೀಡಾದ ಮೂಲಭೂತ ಸೌಕರ್ಯಗಳ ಪುನರ್‌ಸ್ಥಾಪನೆಗಾಗಿ 219 ವಿವಿಧ ಕಾಮಗಾರಿಗಳಿಗೆ ಎಸ್.ಡಿ.ಆರ್.ಎಫ್. ರಡಿ ರೂ.210.50 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಅಲ್ಲದೆ ಲೋಕೋಪಯೋಗಿ ಇಲಾಖೆಯ 7 ಕಾಮಗಾರಿಗಳಿಗೆ ರೂ.36.00 ಲಕ್ಷ, ಸಣ್ಣ ನೀರಾವರಿ ಇಲಾಖೆಯ 5 ಕಾಮಗಾರಿಗಳಿಗೆ ರೂ.91.50 ಲಕ್ಷ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ 156 ಕಾಮಗಾರಿಗಳಿಗೆ ರೂ.5114.50 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

5) ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳಡಿ ಮೂಲಭೂತ ಸೌಲಭ್ಯಗಳ ಪುನರ್ ಸ್ಥಾಪನೆಗಾಗಿ ರೂ.3900.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದೆ.

6) ಪ್ರವಾಹದಿಂದ ಬೆಳೆ ಹಾನಿಯಾದ 8660 ರೈತರಿಗೆ ರೂ.1747.29 ಲಕ್ಷ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ 2019ರ ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಘಟಪ್ರಭಾ, ಕೃಷ್ಣಾ ಹಾಗೂ ಮಲಪ್ರಭಾ ನದಿಗಳಿಂದ ಜಿಲ್ಲೆಯ ಒಟ್ಟು 188 ಗ್ರಾಮಗಳು ಪ್ರವಾಹದಿಂದ ಬಾಧಿತವಾಗಿದ್ದು, ಈ ಗ್ರಾಮಗಳ

45997 ಕುಟುಂಬಗಳು ನಿರಾಶ್ರಿತರಾಗಿರುತ್ತಾರೆ. ಒಟ್ಟಾರೆ ಪ್ರವಾಹ ಪೀಡಿತ ಗ್ರಾಮಗಳ ಹಾನಿ ಮತ್ತು ಕೈಗೊಂಡ ದುರಸ್ಥಿ ವಿವರ ಈ ಕೆಳಗಿನಂತೆ ಇದೆ:

1) **ಬೆಳೆಹಾನಿ:** ಅಂದಾಜು 71750 ಹೆಕ್ಟರ್ ಪ್ರದೇಶದ ಬೆಳೆ ಹಾನಿಯಾಗಿದ್ದು, ಈ ಹಾನಿಗೆ ರೂ.90.84 **ಕೋಟಿಗಳ ಇನ್‌ಪುಟ್ ಸಬ್ಸಿಡಿಯನ್ನು** ರೈತರ ಖಾತೆಗಳಿಗೆ ನೇರವಾಗಿ ಪರಿಹಾರ ತಂತ್ರಾಂಶದ ಮೂಲಕ ಜಮೆ ಮಾಡಲಾಗಿದೆ.

2) **ಜೀವಹಾನಿ:** ಪ್ರವಾಹದಿಂದ ಜಿಲ್ಲೆಯಲ್ಲಿ 07 ಜೀವಹಾನಿಯಾಗಿದ್ದು, ಎಲ್ಲ ಮೃತರ ಕುಟುಂಬಗಳಿಗೆ ತಲಾ ರೂ.7.00 ಲಕ್ಷ ಪರಿಹಾರ ಪಾವತಿಸಲಾಗಿದೆ. [ಎಸ್.ಡಿ.ಆರ್.ಎಫ್./ಎನ್.ಡಿ.ಆರ್.ಎಫ್. ಅನುದಾನ ರೂ.4.00 ಲಕ್ಷ, ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ರೂ.1.00 ಲಕ್ಷ ಹಾಗೂ ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ರೂ.2.00 ಲಕ್ಷ]

3) **ಜಾನುವಾರು ಹಾನಿ:** ಜಿಲ್ಲೆಯಲ್ಲಿ ಪ್ರವಾಹದಿಂದ ಒಟ್ಟು 301 ಜಾನುವಾರುಗಳ ಜೀವ ಹಾನಿಯಾಗಿದ್ದು, ಈ ಹಾನಿಗೆ ರೂ.66.04 ಲಕ್ಷ ಪರಿಹಾರ ಪಾವತಿಸಲಾಗಿದೆ.

4) **ಮನೆಹಾನಿ:** 'ಎ' ಮಾದರಿ 574 ಮನೆಗಳಿಗೆ ರೂ.8.91 ಕೋಟಿ

'ಬಿ' ಮಾದರಿ 2642 ಮನೆಗಳಿಗೆ ರೂ.37.62 ಕೋಟಿ

'ಸಿ' ಮಾದರಿ 8876 ಮನೆಗಳಿಗೆ ರೂ.43.95 ಕೋಟಿ

ಹೀಗೆ ಒಟ್ಟು 12092 ಮನಗಳಿಗೆ ಈವರೆಗೆ ರೂ.90.18 ಕೋಟಿ ಪರಿಹಾರ ಪಾವತಿಸಲಾಗಿದೆ.

5) **ಶಾಲಾ ಕಟ್ಟಡಗಳ ಹಾನಿ:** ಪ್ರವಾಹದಿಂದ 113 ಪ್ರಾಥಮಿಕ/ಪ್ರೌಢ ಶಾಲೆಗಳ 316 ಕೊಠಡಿಗಳು ಭಾಗಶ: ಹಾನಿಯಾಗಿದ್ದು, ಇವುಗಳನ್ನು ದುರಸ್ಥಿಗೊಳಿಸಲು ರೂ.269.21 ಲಕ್ಷಗಳನ್ನು ಬಿಡುಗಡೆಗೊಳಿಸಿ ಎಲ್ಲ ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ.

6) **ಅಂಗನವಾಡಿ ಕೇಂದ್ರಗಳ ದುರಸ್ಥಿ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಾಗಲಕೋಟೆ ಇವರ ವ್ಯಾಪ್ತಿಗೆ ಬರುವ 102 ಭಾಗಶ: ಹಾನಿಯಾದ ಅಂಗನವಾಡಿ ಕೇಂದ್ರಗಳ ದುರಸ್ತಿಗಾಗಿ ರೂ.146.55 ಲಕ್ಷಗಳಿಗೆ ಪಿ.ಆರ್.ಇ.ಡಿ. ಇಲಾಖೆಗೆ ಬಿಡುಗಡೆಗೊಳಿಸಿ, ಎಲ್ಲ ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ.

7) **ತಾತ್ಕಾಲಿಕ ಶೆಡ್‌ಗಳ ವಿವರ:** ಪ್ರವಾಹ ಸಂತ್ರಸ್ಥರಿಗಾಗಿ ಒಟ್ಟು 46 ಗ್ರಾಮಗಳಲ್ಲಿ 344 ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿ, ತುರ್ತು ಪುನರ್‌ವಸತಿ ಕಲ್ಪಿಸಲಾಗಿದೆ. ಈ ಉದ್ದೇಶಕ್ಕೆ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ.

[ರೂ. ಲಕ್ಷಗಳಲ್ಲಿ]

| ಕ್ರ ಸಂ | ಶೆಡ್ ನಿರ್ಮಿಸಿದ ಏಜನ್ಸಿ | ಗ್ರಾಮಗಳ ಸಂಖ್ಯೆ | ನಿರ್ಮಿಸಿದ ಶೆಡ್‌ಗಳ ಸಂಖ್ಯೆ | ಅಂದಾಜು ಮೊತ್ತ |
|---|---|---|---|---|
| 1 | ಲೋಕೋಪಯೋಗಿ | 37<br>01<br>01 | 87<br>16<br>09 | 370.87<br>8.48<br>8.55 |
| 2 | ನಿರ್ಮಿತಿ ಕೇಂದ್ರ | 06 | 184<br>16 | 92.00<br>08.00 |
| 3 | ಪುನರ್ ವಸತಿ ಮತ್ತು ಪುನರ್ ನಿರ್ಮಾಣ | 01 | 32 | 23.00 |
| | **ಒಟ್ಟು** | **46** | **344** | **510.90** |

8) ಒಟ್ಟು 43136 ಕುಟುಂಬಗಳ 149408 ಜನರನ್ನು ಪ್ರವಾಹ ಸಮಯದಲ್ಲಿ 242 ಕಾಳಜಿ ಕೇಂದ್ರಗಳನ್ನು ಪ್ರಾರಂಭಿಸಿ, ಅಲ್ಲಿ ಊಟ ಹಾಗೂ ಉಪಹಾರ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

9) ಪರಿಹಾರ ಕೇಂದ್ರದಲ್ಲಿ ಸಂತ್ರಸ್ಥರಿಗೆ ಊಟದ ವ್ಯವಸ್ಥೆಗಾಗಿ ಕಾಯಿಪಲ್ಲೆ, ಸಾಂಬರ ಪದಾರ್ಥ, ಸಿಲಿಂಡರ್ ಇತ್ಯಾದಿ ಸಲುವಾಗಿ 84.34 ಲಕ್ಷ ಅನುದಾನವನ್ನು ಎಲ್ಲಾ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಆಹಾರ ಸಾಮಗ್ರಿಗಳಾದ ಅಕ್ಕಿ, ಗೋಧಿ, ಬೇಳೆ, ಎಣ್ಣೆ, ಉಪ್ಪುಗಳಿಗಾಗಿ ರೂ.74.00 ಲಕ್ಷಗಳನ್ನು ಜಿಲ್ಲಾ ವ್ಯವಸ್ಥಾಪಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲಾಗಿದೆ.

10) ಪ್ರವಾಹದ ಸಂದರ್ಭದಲ್ಲಿ ಜಿಲ್ಲೆಯಲ್ಲಿ 117 ಗೋಶಾಲೆಗಳನ್ನು ಪ್ರಾರಂಭಿಸಿ, 69977 ಜಾನುವಾರುಗಳಿಗೆ ಮೇವನ್ನು ಪೂರೈಸಲಾಗಿದೆ.

11) ಒಟ್ಟು 51,542 ಸಂತ್ರಸ್ಥರಿಗೆ ತಲಾ ರೂ.10,000/- ರಂತೆ ಎಕ್ಸ್‌ಗ್ರೇಶಿಯಾ ಪರಿಹಾರ ನೀಡಲಾಗಿದೆ

12) ಸರ್ಕಾರದ ಆದೇಶದಂತೆ ಜಿಲ್ಲಾಡಳಿತದಿಂದ ಒಟ್ಟು 46,389 ಬಾಧಿತ ಕುಟುಂಬಗಳಿಗೆ ವಿಶೇಷ ಆಹಾರ ಪೊಟ್ಟಣ ವಿತರಿಸಲು ರೂ.380.00 ಲಕ್ಷಗಳ ಅನುದಾನವನ್ನು ಜಿಲ್ಲಾ ವ್ಯವಸ್ಥಾಪಕರು, ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ ಬಾಗಲಕೋಟೆ ಇವರಿಗೆ ಬಿಡುಗಡೆಗೊಳಿಸಿ ವಿತರಿಸಲಾಗಿದೆ.

13) ಪ್ರವಾಹದಿಂದ ಹಾನಿಯಾದ 240 ನೇಕಾರರ ಕುಟುಂಬಗಳಿಗೆ ರೂ.25,000/- ರಂತೆ ಒಟ್ಟು ರೂ.60.00 ಲಕ್ಷ ಪರಿಹಾರ ಪಾವತಿಸಲಾಗಿದೆ.

14) ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆಗಾಗಿ [ರಸ್ತೆ ದುರಸ್ತಿ, ಶಿಕ್ಷಣ, ಹೆಸ್ಕಾಂ ಇಲಾಖೆ, ಕುಡಿಯುವ ನೀರಿನ ಕಾಮಗಾರಿಗಳು] ರೂ.4485.54 ಲಕ್ಷಗಳ ಅನುದಾನದಲ್ಲಿ ಒಟ್ಟು 421 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಸಂಖ್ಯೆ: ಕಂಇ 159 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು